ಜಗಳಕ್ಕೆ ಬೀಳುವುದು ಗೊತ್ತಿದ್ದ ವಿಷಯವೆ. ಆಕೆಯೂ ನನ್ನ ಹಾಗೆ ಕೆಲಸಕ್ಕೆ ಹೋಗಬೇಕಾದವಳು. ತುಸು ಹೆಚ್ಚಾಗಿಯೇ ಮನೆ, ಮಕ್ಕಳ ಜವಾಬ್ದಾರಿ ನಿರ್ವಹಿಸಬೇಕಾದವಳು. ನಾನು ಮಾತ್ರ ಅನೇಕ ಗಂಡಸರಂತೆ ಸೋಂಬೇರಿ, ಮೈಗಳ್ಳ, ಬೇಜಬ್ದಾರಿ, ಜೊತೆಗೆ ನಿರ್ಲಜ್ಜ ಕೂಡ.

ಇಷ್ಟರಲ್ಲೇ ಮಗಳು ಶಾಲೆಗೆ ಹೋಗಬೇಕು. ಅವಳ ತಿಂಡಿ, ಟಿಫನ್‌ಬಾಕ್ಸ್, ಶೂ ಸಾಕ್ಸು, ಬ್ಯಾಗು ಎಂಬ ಮಾರ್ನಿಂಗ್‌ಶೋ ಕೂಡ ಮಾರಾಮಾರಿ ಇಲ್ಲದೆ ಮುಗಿಯುವಂಥದ್ದಲ್ಲ. ಅನಂತರ ಮಗನ ಸಂಭಾಳಿಸಿ, ಅವನನ್ನು ಕೆಲಸದ ಹುಡುಗಿಯ ಕೈಗೆ ಒಪ್ಪಿಸಿಯೇ ಹೋಗಬೇಕು. ಪ್ರತಿದಿನವೂ ಆ ಹುಡುಗಿಗೆ ನಮ್ಮ ಸುಪುತ್ರನನ್ನು ಹೇಗೆಲ್ಲಾ ನೋಡಿಕೊಳ್ಳಬೇಕು ಎಂಬ ಉಪದೇಶದ, ತಾಕೀತಿನ, ಎಚ್ಚರಿಕೆಯ ಉದ್ದುದ್ದ ಸುವಾರ್ತೆಗಳ ಕೊಡಬೇಕು. ಈ ಪರಿಯ ಗಲಭೆ ಕಾಮಗಾರಿಗಳು ನಡೆಯುವಾಗ ಮನೆ ಒಂದು ರಣರಂಗವಾಗದಿರಲು ಹೇಗೆ ಸಾಧ್ಯ?

ಈಗ ಹೆಂಡತಿಯ ಕಿರುಚಾಟ ನನ್ನ ಸ್ನಾನದ ಮನೆಯ ಬಾಗಿಲಿನ ತನಕವೂ ನಡೆದು ಬಂದಿತ್ತು. "ಹಾಳಾದವಳು, ನೆಟ್ಟಗೆ ಸ್ನಾನ ಮಾಡೋಕೂ ಬಿಡಲ್ಲ ಅಂತಿ. ಒಂದ್ನಿಮಿಷ ಮುಗಿಸಿ ಬರ್ತೀನಿ ಇರು. ಇಲ್ಲಿ ನೀ ಹೇಳೋದು ನೆಟ್ಟಗೆ ಕೇಳಿಸ್ತಾ ಇಲ್ಲ!" ಎಂದೆ.

"ರೀ ನಿಮಗೆ ಹೇಳ್ತಾ ಇರೋದು. ಮಗು ಕೊರಳಲ್ಲಿ ಬಂಗಾರದ ಸರವಿತ್ತು, ಅದು ಕಾಣ್ತೆಲ್ಲ. ಏನಾದ್ರೂ ಎತ್ತಿಟ್ಟಿದ್ದೀರಾ?'' ಆಕೆಯ ಆತಂಕ.

